ಆರ್‌ಬಿಐ/2008–09/126
ಯುಬಿಡಿ.ಪಿಸಿಬಿ.ಸಿಐಆರ್.ನಂ.6/12.05.000/2208–09

ಅಗಸ್ಟ್ 12,2008

ಎಲ್ಲ ಪ್ರಾಥಮಿಕ(ಅರ್ಬನ್)ಸಹಕಾರಿ ಬ್ಯಾಂಕುಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

ಮಾನ್ಯರೆ

**ವಿದೇಶದಿಂದ ಅಗ್ಗದ ನಿಧಿಯ ಸಂಶಯಾಸ್ಪದ ಕೊಡುಗೆಯ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕು ಸಾರ್ವಜನಿಕರನ್ನು ಎಚ್ಚರಿಸುತ್ತದೆ**

ಜನಸಾಮಾನ್ಯರನ್ನು ಮೋಸಗೊಳಿಸುವ ಉದ್ದೇಶದ ಖೋಟಾ ಲಾಟರಿ ಮತ್ತು ಹಣ ಚಲಾವಣೆ ಯೋಜನೆಗಳು ಆಗಾಗ ಬೆಳಕಿಗೆ ಬರುತ್ತಿರುವುದು ತಮಗೆಲ್ಲಾ ತಿಳಿದೇ ಇದೆ. ಲಾಟರಿ ಯೋಜನೆಗಳಲ್ಲಿ ಭಾಗವಹಿಸಲು ಯಾವುದೇ ರೀತಿಯಲ್ಲಿ ಹಣ ರವಾನಿಸುವುದನ್ನು ವಿದೇಶಿ ವಿನಿಮಯ ನಿರ್ವಹಣಾ ಕಾಯಿದೆ 1999ರ ಅಡಿಯಲ್ಲಿ ನಿಷೇಧಿಸಿರುವುದಾಗಿ ಸ್ಪಷ್ಟೀಕರಿಸಲಾಗಿದೆ. ಹಾಗೆಯೇ, ಈ ನಿರ್ಬಂಧಗಳು, ಹಣ ಚಲಾವಣೆ ಯೋಜನೆ ಅಥವಾ ಬಹುಮಾನದ ಹಣ/ಪುರಸ್ಕಾರ ಇತ್ಯಾದಿ ಪಡೆಯಲು ಹಣ ರವಾನೆಯಂತಹ, ಬೇರೆ ಬೇರೆ ಹೆಸರಿನಲ್ಲಿ ನಿರ್ವಹಿಸಲ್ಪಡುವ ಲಾಟರಿ ರೀತಿಯ ಯೋಜನೆಗಳಲ್ಲಿ ಪಾಲ್ಗೊಳ್ಳಲು ಹಣ ರವಾನಿಸುವುದಕ್ಕೂ ಅನ್ವಯಿಸುತ್ತವೆ. ಇದಕ್ಕೆ ಸಂಬಂಧಪಟ್ಟಂತೆ ಭಾರತೀಯ ರಿಸರ್ವ್ ಬ್ಯಾಂಕಿನಿಂದ ನೀಡಲ್ಪಟ್ಟ ಈ ವಿಷಯದ ಮೇಲಿನ ದಿನಾಂಕ ಡಿಸೆಂಬರ್ 7,2007ರ ಪತ್ರಿಕಾ ಪ್ರಕಟಣೆ(ಪ್ರತಿ ಲಗತ್ತಿಸಿದೆ)ಯತ್ತ ನಾವು ತಮ್ಮ ಗಮನ ಸೆಳೆಯುತ್ತೇವೆ. ಪತ್ರಿಕಾ ಪ್ರಕಟಣೆಯ ವಸ್ತು–ವಿಷಯವನ್ನು ನಿಮ್ಮ ಗ್ರಾಹಕರ ಗಮನಕ್ಕೆ ತರಬೇಕೆಂದು ಈಮೂಲಕ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ

(ಎ.ಕೆ.ಖೌಂಡ್)
ಪ್ರಭಾರಿ ಮುಖ್ಯ ಮಹಾ ವ್ಯವಸ್ಥಾಪಕರು